# ಸಕಲೇಶಪುರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ

ಸಿ.ಸಿ. ಸಂಖ್ಯೆ 66/2013

| | | |
|---|---|---|
| ಸಾಕ್ಷಿದಾರರ ಹೆಸರು | ಧರ್ಮ | ಸಿ.ಡಬ್ಲ್ಯೂ 8 |
| | | ಪಿ.ಡಬ್ಲ್ಯೂ 5 |
| ಗಂಡನ ಹೆಸರು | ಪಾಪಣ್ಣಃ ಉಃ ಬೈರಯ್ಯ | ದಿನಾಂಕ –08-06-2022 |
| ವಯಸ್ಸು | 39 ವರ್ಷ | |
| ವೃತ್ತಿ | ಕೂಲಿ ಕೆಲಸ | |
| ವಾಸಸ್ಥಳ | ಮಳಲಿ | |

ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ ಃ ಮಾನ್ಯ ಎ ಪಿ ಪಿ ಯವರಿಂದ</u>

ನಾನು ಸಕಲೇಶಪುರದ ಮಳಲಿ ಗ್ರಾಮದಲ್ಲಿ ವಾಸವಾಗಿರುತ್ತೇನೆ. ಸಮಾರು 7-8 ವರ್ಷಗಳ ಹಿಂದೆ ಮಳಲಿ ಗ್ರಾಮ ಪಂಚಾಯಿತಿ ಕಛೇರಿಯಲ್ಲಿ ಪೋಲೀಸರು ಗ್ರಾಮ ಪಂಚಾಯಿತಿ ಕಛೇರಿಯಲ್ಲಿ ರಾಬರಿಯಾದ ಬಗ್ಗೆ ಪಂಚನಾಮೆ ಬರೆದು ನನ್ನ ಸಹಿ ಪಡೆದಿರುತ್ತಾರೆ. ಸಮಯ ನೆನಪಿಲ್ಲ. ಸ್ಥಳವನ್ನು ಯಾರು ತೋರಿಸಿದರು ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಪಂಚನಾಮೆಯಲ್ಲಿಯ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 59 ಎಂದು, ಸಾಕ್ಷಿ ಸಹಿಯನ್ನು ನಿಪಿ 59 ಎ ಎಂದು ಗುರುತಿಸಲಾಯಿತು. ಪಂಚನಾಮೆ ಸಮಯದಲ್ಲಿ ಚಾಸಾ 9 ಮತ್ತು 10 ರವರು ಹಾಜರಿದ್ದರು. ನಿಪಿ 59 ರಲ್ಲಿ ಬರೆದ ವಿಷಯದ ಬಗ್ಗೆ ನನಗೆ ಮಾಹಿತಿ ಇಲ್ಲ.

**ಈ ಹಂತದಲ್ಲಿ ಮಾನ್ಯ** ಮಾನ್ಯ **ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಬಾಗಶಃ ಪ್ರತೀಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಗಿದೆ.**

**<u>ಪಾಟೀ ಸವಾಲುಃ ಮಾನ್ಯ ಸ. ಸ. ಅ. ರವರಿಂದ ಃ-</u>**

ದಿಃ**05.10.2009** ರಂದು ಮಳಲಿ ಗ್ರಾಮ ಪಂಚಾಯಿತಿ ಕಛೇರಿಯಲ್ಲಿ ಚಾಸಾ **1** ರವರು ತೋರಿಸಿದ ಸ್ಥಳದಲ್ಲಿ ಪೋಲಿಸರು ಕಛೇರಿಯ ಎಲ್ಲಾ ಕೊಠಡಿಗಳನ್ನು ವೀಕ್ಷಿಸಿ ಪಂಚನಾಮೆ ಯನ್ನು ಬೆಳಗ್ಗೆ **11-00** ಗಂಟೆಯಿಂದ **12-00** ಗಂಟೆವರೆಗೆ ಬರೆದು ಅದನ್ನು ಓದಿ ಹೇಳಿ ನನ್ನ ಸಹಿ ಪಡೆದರು ಎಂದರೆ ಸರಿಯಲ್ಲ. ನಿಪಿ **59** ರ ವಿಷಯ ನನಗೆ ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ</u> ಆರೋಪಿಯ ಪರ ಶ್ರೀ ವೈ ಡಿ ಆರ್ ವಕೀಲರಿಂದಃ

ಪಂಚನಾಮೆಗೆ ಸಹಕರಿಸಲು ಪೋಲೀಸರು ನನಗೆ ನೋಟೀಸ್ ನೀಡಿರಲಿಲ್ಲ. ಯಾವ ವಿಷಯವಾಗಿ ಮಹಜರ್ ಮಾಡಿದರು ಎಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಪೋಲೀಸರು ಮಹಜರ್ ಮಾಡಿ ನನ್ನ ಸಹಿ ಪಡೆದಿಲ್ಲ. ನಾನು ಕೆಲಸ ಮುಗಿಸಿಕೊಂಡು ಬಂದ ನಂತರ ಒಂದು ದಾಖಲೆಗೆ ಪೋಲೀಸರು ನನ್ನ ಸಹಿ ಪಡೆದರು.

<u>ಮರುವಿಚಾರಣೆಃ</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

<u>ಓ ಹೇ ಕೇ ಸ ಇ ಒ</u>

ಸಾಕ್ಷಿ ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಸಕಲೇಶಪುರ.